# ಪ್ರಹ್ಲಾದ ಜೋಶಿ, ಶೆಟ್ಟರ್, ಹೊರಟ್ಟಿ ಮತದಾನ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಇಲ್ಲಿನ ನಾಗಶೆಟ್ಟಿಕೊಪ್ಪ ವಿವೇಕಾನಂದ ಕಾಲನಿಯಲ್ಲಿರುವ ಡಾ. ಪಿ.ವಿ. ದತ್ತಿ ರೋಟರಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಕುಟುಂಬದವರು ಮತದಾನ ಮಾಡಿದರು.



ವಾರ್ಡ್ ನಂ. 46ರ ನಿವಾಸಿಯಾದ ಜೋಶಿ ಅವರು ಬೂತ್ ನಂ. 3ರಲ್ಲಿ ಪತ್ನಿ ಜ್ಯೋತಿ ಜೋಶಿ, ಪುತ್ರಿ, ಅರ್ಪಿತಾ, ಅನುಷಾ ಜತೆಗೆ ಆಗಮಿಸಿ ಮತದಾನ ಮಾಡಿದರು. 2 ದಿನಗಳ ಹಿಂದೆ ವಿವಾಹವಾದ ಜೋಶಿ ಪುತ್ರಿ ಅರ್ಪಿತಾ ತಮ್ಮ ಪತಿ ಹೃಷಿಕೇಶ ಜತೆ ಆಗಮಿಸಿದ್ದರು. ಪತ್ನಿ ಮತದಾನ ಮಾಡುವಾಗ ಹೃಷಿಕೇಶ ಮತಗಟ್ಟೆ ಹೊರಗೆ ಕಾದಿದ್ದರು.

ಮತದಾನದ ಬಳಿಕ ಮಾತನಾಡಿದ ಪ್ರಹ್ಲಾದ ಜೋಶಿ, ಹುಬ್ಬಳ್ಳಿ- ಧಾರವಾಡದಲ್ಲಿ ಬಿಜೆಪಿ ಹೊರತಾಗಿ ಬೇರೆ ಪಕ್ಷದಲ್ಲಿ ಗಟ್ಟಿಯಾದ ನಾಯಕತ್ವವಿಲ್ಲ. ಈ ಭಾಗದಲ್ಲಿ ಏನಾದರೂ ಅತ್ಯುತ್ತಮ ಕಾರ್ಯವಾಗಿದೆ ಎಂದರೆ ಅದಕ್ಕೆ ಬಿಜೆಪಿ ಕಾರಣ. ಇಲ್ಲಿ ನಾವು 55-60 ಕ್ಷೇತ್ರದಲ್ಲಿ ಗೆಲುವು ಸಾಧಿಸಲಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರು ತಮ್ಮ ಪತ್ನಿ ಶಿಲ್ಪಾ ಶೆಟ್ಟರ್ ಜತೆಗೂಡಿ ವಿನಯ ಕಾಲನಿಯ ದೇವಕಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ತೆರೆಯಲಾದ ಬೂತ್ ನಂ. 13ರಲ್ಲಿ ಮತದಾನ ಮಾಡಿದರು. ಆದರೆ, ಅವರ ಪುತ್ರ ಸಂಕಲ್ಪ ಶೆಟ್ಟರ್ ಹೆಸರು ಬೇರೆ ಬೂತ್‌ನಲ್ಲಿದ್ದ ಕಾರಣ ಅವರು ಮೊದಲೇ ಮತದಾನ ಮಾಡಿದ್ದರು. ಸಭಾಪತಿ ಬಸವರಾಜ ಹೊರಟ್ಟಿ ಅವರು, ಇಲ್ಲಿನ ಲ್ಯಾಮಿಂಗ್ಟನ್ ಪ್ರೌಢಶಾಲೆಯಲ್ಲಿ ಮತ ಚಲಾಯಿಸಿದರು. ಪಶ್ಚಿಮ ವಿಧಾನಸಭಾ ಮತಕ್ಷೇತ್ರದ ಶಾಸಕರಾದ ಅರವಿಂದ ಬೆಲ್ಲದ ಅವರು ತಂದೆ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಹಾಗೂ ಕುಟುಂಬ ಸದಸ್ಯರೊಂದಿಗೆ ಬುದ್ದರಕ್ಷಿತ ಶಾಲೆಯಲ್ಲಿ ಸ್ಥಾಪಿಸಿರುವ ಮತಗಟ್ಟೆಗೆ ಆಗಮಿಸಿ, ತಮ್ಮ ಹಕ್ಕು ಚಲಾಯಿಸಿದರು. ಪೂರ್ವ ಕ್ಷೇತ್ರದ ಶಾಸಕ ಪ್ರಸಾದ ಅಬ್ಬಯ್ಯ ತಾಯಿ ಧನಲಕ್ಷ್ಮೀ, ಪತ್ನಿ ವೃಂದಾ ಜತೆಗೆ ಸಂತೋಷ ನಗರದ ಸಹಿಪ್ರಾ ಶಾಲೆಯಲ್ಲಿ, ಮಾಜಿ ಸಚಿವ ಎ.ಎಂ. ಹಿಂಡಸಗೇರಿ ಅವರು ಪಿ.ಬಿ. ರಸ್ತೆ ಗಾರ್ಡನ್ ಪೇಟೆಯಲ್ಲಿ ಸ್ಥಾಪಿಸಲಾದ ಮತಗಟ್ಟೆಯಲ್ಲಿ ಮತ ಹಾಕಿದರು. ಹಿರಿಯ ಸಾಹಿತಿ ಚೆನ್ನವೀರ ಕಣವಿ ಸಹ ಕಲ್ಯಾಣನಗರದಲ್ಲಿ ತಮ್ಮ ಹಕ್ಕು ಚಲಾಯಿಸಿದರು. ಮೂರುಸಾವಿರಮಠದ ಮಲ್ಲಿಕಾರ್ಜುನ ಸ್ವಾಮೀಜಿ ಅವರು ಮೃತ್ಯುಂಜಯ ಶಾಲೆಯ ಮತಗಟ್ಟೆಯಲ್ಲಿ ಮೊದಲ ಮತವನ್ನು ಚಲಾಯಿಸಿದರು. ಅದೇ ರೀತಿ ವಿಧಾನ ಪರಿಷತ್ ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ ಹಾಗೂ ಅವರ ಕುಟುಂಬದ ಸದಸ್ಯರು ಕೆ.ಇ. ಬೋರ್ಡ್ ಶಾಲಾ ಆವರಣದಲ್ಲಿ ಮತ ಚಲಾಯಿಸಿದರು. ಜಿಲ್ಲಾಧಿಕಾರಿ, ಜಿಲ್ಲಾ ಚುನಾವಣಾಧಿಕಾರಿ ನಿತೇಶ್ ಪಾಟೀಲ ಅವರು ಕರ್ನಾಟಕ ಕಾಲೇಜು ಬಿಬಿಎ ಕಾಲೇಜಿನ ಮತಗಟ್ಟೆಯಲ್ಲಿ ಮತ ಚಲಾಯಿಸಿದರು. ಕೆಪಿಸಿಸಿ ಮಾಧ್ಯಮ ವಿಶ್ಲೇಷಕ ಪಿ.ಎಚ್. ನೀರಲಕೇರಿ ದಂಪತಿಗಳು ಬುದ್ಧ ರಕ್ಷಿತ ಶಾಲಾ ಆವರಣದಲ್ಲಿ ಮತ ಚಲಾಯಿಸಿದರು.



ಮತದಾನ ಮಾಡಿದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಕುಟುಂಬ.



ಮತದಾನದ ಹಕ್ಕು ಚಲಾಯಿಸಿದ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್.

# ಸರ್ಕಾರಿ ಮನೆಗೆ ನಾನು ಭಿಕ್ಷೆ ಬೇಡುತ್ತಿಲ್ಲ, ಕೊಡೋದಾದ್ರೆ ಕೊಡಲಿ: ಹೊರಟ್ಟಿ

ಹುಬ್ಬಳ್ಳಿ: ಸಭಾಪತಿಗಳಿಗೆ ಸರ್ಕಾರಿ ಮನೆ ಕೊಡುವ ವಿಚಾರವಾಗಿ ಸ್ಪಂದಿಸದ ಸರ್ಕಾರದ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮನೆ ವಿಚಾರವಾಗಿ 8 ಬಾರಿ ಸರ್ಕಾರಕ್ಕೆ ಪತ್ರ



ಬರೆದಿದ್ದೇನೆ. ಆದರೆ, ಸ್ಪಂದನೆ ಸಿಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನೆಗಾಗಿ ನಾನು ಭಿಕ್ಷೆ ಬೇಡುತ್ತಿಲ್ಲ. ಇನ್ಮುಂದೆ ಮನೆ ಕೊಟ್ಟರೆ ಕೊಡಲಿ ಬಿಟ್ಟರೆ ಬಿಡಲಿ. ಈಗಾಗಲೇ 8 ಬಾರಿ ಪತ್ರ ಬರೆದಿದ್ದೇನೆ. ಈ ವಿಷಯವಾಗಿ ಮತ್ತೊಮ್ಮೆ ಪತ್ರ ಬರೆಯುವೆ. ಅದೇ ನನ್ನ ಕೊನೆ ಪತ್ರ ಎಂದರು. ಇದೇವೇಳೆ 1ರಿಂದ 6ನೆಯ ತರಗತಿಯ ಶಾಲೆಗಳನ್ನು ಆರಂಭ ಮಾಡಬೇಕು. ನಾನು ಹಿಂದೆಯೇ ಶಾಲೆ ಆರಂಭಕ್ಕೆ ಸಲಹೆ ನೀಡಿದ್ದೆ ಎಂದರು.

ಕನ್ನಡಪ್ರಭ Sat, 04 September 2021
https://kpepaper.asianetnew